**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.**

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 48/2019.

ಪ್ರಾ.ಸಾ.ಃ1

ಚಾ.ಸಾ.ಃ3

ಹೆಸರು ಃ ಶ್ರೀಮತಿ ಸ್ಮಿತಾ
ಗಂಡನ ಹೆಸರು ಃ ಸಿಜು
ವಯಸ್ಸು ಃ 39 ವರ್ಷ
ಉದ್ಯೋಗ ಃ ಲ್ಯಾಬ್ ಟೆಕ್ನಿಷಿಯನ್ , ಕೂರ್ಗ್ ಡಯಾಗ್ನೆಸ್ಟಿಕ್ ಲ್ಯಾಬ್
ವಿಳಾಸ ಃ ಗೋಣಿಕೊಪ್ಪ

... ........................................................................................................ ...

ದಿನಾಂಕ 15 ನೇ ಫೆಬ್ರವರಿ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ನಾನು ಸುಮಾರು 9 ವರುಷಗಳಿಂದ ಕೂರ್ಗ್ ಡಯಾಗ್ನೆಸ್ಟಿಕ್ ಲ್ಯಾಬ್ ನಲ್ಲಿ ಲ್ಯಾಬ್ ಟೆಕ್ನಿಷಿಯನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಕೆಲಸದ ಅವಧಿ ಬೆಳಗ್ಗೆ 9 ಗಂಟೆಯಿಂದ ಸಂಜೆ 4.30 ಆಗಿರುತ್ತದೆ.

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ಕೃತ್ಯ ಸ್ಥಳ ಮಹಜರ್ ಆಗಿದ್ದು ಅದನ್ನು ಈಗ ನಿ ಪಿ 1 ಎಂದು, ಸಾಕ್ಷಿಯ ಸಹಿ ನಿ ಪಿ 1 ಎ ಎಂದು ಗುರುತಿಸಲಾಯಿತು. ಸುಮಾರು ಮೂರುವರೆ ವರುಷಗಳ ಹಿಂದೆ ನಮ್ಮ ಲ್ಯಾಬ್ ನಲ್ಲಿ ಕಳ್ಳತನವಾಗಿದ್ದ ವಿಚಾರದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಮಹಜರ್ ಮಾಡಿದರು. ಆಗ ನಾನು ನಿ ಪಿ 1 ಕ್ಕೆ ಸಹಿ ಮಾಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಪೊಲೀಸರು ಕೃತ್ಯ ಸ್ಥಳ ಮಹಜರ್ ಗೆ ಬಂದಾಗ ನಮ್ಮ ಲ್ಯಾಬ್ ನಲ್ಲಿ ಕಳ್ಳತನ ಮಾಡಿದ ಆರೋಪಿಯನ್ನು ಕರೆದುಕೊಂಡು ಬಂದಿದ್ದರು. ಸದರಿ ಆರೋಪಿಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುವುದರಿಂದ ಅವರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಬಿ ಎಸ್ ವಕೀಲರಿಂದ.

ಕಳ್ಳತನವಾದ ದಿನದಂದೇ ಪೊಲೀಸರು ಸ್ಥಳಕ್ಕೆ ಬಂದು ಬರವಣಿಗೆ ಮಾಡಿದ್ದಾರೆ. ನಾನು ಕೂರ್ಗ್ ಡಯಾಗ್ನೆಸ್ಟಿಕ್ ಲ್ಯಾಬ್ ನಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿಲ್ಲ. ವಾಶ್ ರೂಂ ನ ಕಿಟಕಿ ಹೊಡೆದು ಕಳ್ಳತನ ಮಾಡಿರುತ್ತಾರೆ. ಅದು ಒಂದು ಚಿಕ್ಕ ಕಿಟಕಿ ಆಗಿರುತ್ತದೆ ಎಂದರೆ ಸರಿ. ಅದು ಸುಮಾರು 1X1 ಅಳತೆಯ ಕಿಟಕಿ ಆಗಿರಬಹುದು ಎಂದರೆ ಸರಿ. ಸದರಿ ಕಿಟಕಿಗೆ 3 ಅಡ್ಡ ಸರಳುಗಳನ್ನು ಅಳವಡಿಸಲಾಗಿತ್ತು ಎಂದರೆ ಸರಿ. ಅದರಲ್ಲಿ ಒಂದು ಸರಳನ್ನು ಕಟ್ ಮಾಡಿ ಕಳ್ಳ ಒಳಗೆ ಬಂದಿರುತ್ತಾನೆ. ಆ ದಿನ ಯಾವುದೇ ಕಳ್ಳತನ ಆಗದೇ ಇದ್ದರೂ ಚಾ ಸಾ 1ರವರ ದೂರಿಗೆ ಅನುಗುಣವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ :- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.